ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 1, July-August 2022, Pp. 73-85.**
**©*IIMRD*, Mysuru**
IIMRD JOURNALS
**www.iimrd.com**

# ರಾಯಚೂರು ಜಿಲ್ಲಾ ಮಹಿಳೆಯರ ರಾಜಕೀಯ ಸಾಮಾಜೀಕರಣ

**ವೀರೇಶ ಮಲ್ಲಯ್ಯ**
ಸಂಶೋಧನಾ ವಿದ್ಯಾರ್ಥಿ, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ,
ವಿದ್ಯಾರಣ್ಯ. ತಾಲೂಕು ಹೊಸಪೇಟೆ, ಜಿಲ್ಲೆ ವಿಜಯನಗರ.

**ಸಾರಾಂಶ: (Abstract)**

ರಾಜಕೀಯದಲ್ಲಿ ಮಹಿಳೆಯರು ಸಹಭಾಗಿತ್ವ ಹೊಂದಬೇಕೆಂದರೆ ಮುಖ್ಯವಾಗಿ ಮಹಿಳೆಯರಿಗೆ ರಾಜಕೀಯ ಸಾಮಾಜೀಕರಣದ ಅವಶ್ಯಕತೆ ಇದೆ. 'ರಾಜಕೀಯ ಸಾಮಾಜೀಕರಣ' ಎಂದರೆ 'ಒಂದು ರಾಜಕೀಯ ವ್ಯವಸ್ಥೆಯ ಗುಣಶೀಲ ವರ್ತನೆಗಳು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ತಿಳಿಪಡಿಸುವ(ಕೊಂಡೊಯ್ಯುವ) ಪ್ರಕ್ರೀಯೆಯೇ 'ರಾಜಕೀಯ ಸಾಮಾಜೀಕರಣ' ಈ ರಾಜಕೀಯ ಸಾಮಾಜೀಕರಣದಲ್ಲಿ ರಾಜಕೀಯ ಸಂಸ್ಕೃತಿಯನ್ನು ರಕ್ಷಿಸುವ ಮತ್ತು ಬದಲಾಯಿಸುವ ಪ್ರಕ್ರಿಯೇ ಆಗಿದೆ. ಈ ಪ್ರಕ್ರಿಯೇ ಪ್ರವರ್ತನೆಯಿಂದ ವ್ಯಕ್ತಿಗಳನ್ನು ರಾಜಕೀಯ ಸಂಸ್ಕೃತಿಗೆ ಪ್ರವೇಶಗೊಳಿಸಲಾಗುತ್ತದೆ. ಈ ಹಿನ್ನಲೆಯಿಂದ ಪ್ರಸ್ತುತ ಅಧ್ಯಯನದಲ್ಲಿ ರಾಜಕೀಯ ಸಾಮಾಜೀಕರಣದ ಕುರಿತಂತೆ ರಾಯಚೂರು ಜಿಲ್ಲೆಯ ಮಹಿಳಾ ಸಮುದಾಯವನ್ನು ಆಧಾರಿಸಿ ಚರ್ಚಿಸಲಾಗಿದೆ.

**ಮುಖ್ಯಪದಗಳು (Keywords):** ರಾಜಕೀಯ ಸಾಮಾಜೀಕರಣ, ಮಹಿಳೆಯರು, ಮಹಿಳಾ ಸಮುದಾಯದ, ರಾಯಚೂರು.

## ಪೀಠಿಕೆ

ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರ ರಾಜಕೀಯ ಪ್ರವೇಶಕ್ಕೆ ಅನೇಕ ಅಡೆತಡೆಗಳಿವೆ. ಪ್ರಮುಖವಾಗಿ ನಮ್ಮ ಸಾಮಾಜಿಕ ವ್ಯವಸ್ಥೆಯು ಮಹಿಳೆಯರ ರಾಜಕೀಯಕ್ಕೆ ಅಡ್ಡಿಯುಂಟು ಮಾಡುತ್ತಿರುವುದು ಕಂಡುಬರುತ್ತಿದೆ. 'ರಾಜಕೀಯ ಸಾಮಾಜೀಕರಣ' ಎಂದರೇ 'ರಾಜಕೀಯ ಮೌಲ್ಯಗಳನ್ನು, ಧೋರಣೆಗಳನ್ನು, ನಂಬಿಕೆಗಳನ್ನು, ಅಭಿರುಚಿ, ನಿಷ್ಠೆ, ಭಾವನೆಗಳನ್ನು ವ್ಯಕ್ತಿಗಳಲ್ಲಿ ರೂಪಿಸಿ ಅವುಗಳನ್ನು ಪರಂಪರೆಯ ರೂಪದಲ್ಲಿ ಮುಂದಿನ ಪೀಳಿಗೆಗೆ ರವಾನಿಸುವ ಒಂದು ವಿಧಾನ. ರಾಜಕೀಯ ಸಾಮಾಜೀಕರಣವೆಂಬುದು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ವ್ಯಕ್ತಿಯ ಜೀವನದ ಅವಧಿಯ ಉದ್ದಕ್ಕೂ ವಿವಿಧ ರೀತಿಯಲ್ಲಿ ಪ್ರಭಾವಿಸುವುದಾಗಿದೆ". (ಮೀನಾಕ್ಷಿ ಡಿ, 2010).

## ಅಧ್ಯಯನ ಉದ್ದೇಶಗಳು

- ಮಹಿಳೆಯರು ರಾಜಕೀಯ ಪ್ರವೇಶಕ್ಕೆ ಅಡ್ಡಿಯುಂಟಾಗುತ್ತಿರುವ ಸಂಗತಿಗಳನ್ನು ತಿಳಿಯುವುದು.

*Please cite this article as:* ವೀರೇಶ ಮಲ್ಲಯ್ಯ (2022) ರಾಯಚೂರು ಜಿಲ್ಲಾ ಮಹಿಳೆಯರ ರಾಜಕೀಯ ಸಾಮಾಜೀಕರಣ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(1). ಪು.ಸಂ.* 73–85.

- ಮಹಿಳಾ ಸಮುದಾಯಕ್ಕೆ ಅಗತ್ಯವಿರುವ ರಾಜಕೀಯ ಸಾಮಾಜೀಕರಣ ಕುರಿತಂತೆ ಚರ್ಚಿಸುವ ಉದ್ದೇಶ
- ರಾಜಕೀಯದಲ್ಲಿ ಮಹಿಳೆಯರ ಸಹಭಾಗಿತ್ವ ರಾಯಚೂರು ಜಿಲ್ಲೆಯಲ್ಲಿ ಯಾವ ಮಟ್ಟದಲ್ಲಿದೆ ಎನ್ನುವುದನ್ನು ಶೋಧಿಸುವ ಉದ್ದೇಶ ಹೊದಿದೆ.

**ಅಧ್ಯಯನದ ವ್ಯಾಪ್ತಿ**

ಅದರಲ್ಲಿ ವಿಶೇಷವಾಗಿ ರಾಜಕೀಯದಲ್ಲಿ ಮಹಿಳೆಯರ ಸಾಮಾಜೀಕರಣದ ಕುರಿತಂತೆ ಅಧ್ಯಯನಿಸುವಾಗ ರಾಯಚೂರು ಜಿಲ್ಲೆಯ ಮಹಿಳಾ ಸಮುದಾಯವನ್ನಾಧರಿಸಿ ಅಧ್ಯಯನಕ್ಕೆ ಮಿತಿ ಹಾಕಿಕೊಳ್ಳಲಾಗಿದೆ.

**ಅಧ್ಯಯನ ವಿಧಾನ ಮತ್ತು ವೈಧಾನಿಕತೆ**

ರಾಯಚೂರು ಜಿಲ್ಲೆಯ ಮಹಿಳೆಯರ ರಾಜಕೀಯ ಭಾಗವಹಿಸುವಿಕೆ ಯಾವ ಮಟ್ಟದಲ್ಲಿದೆ ಎನ್ನುವುದರ ಕುರಿತಂತೆ ವಿಧಾನಸಭೆ ಮತ್ತು ವಿದಾನಪರಿಷತ್‌ಗೆ ಈ ವರೆಗೂ ಸ್ಪರ್ಧಿಸಿದ ಮಹಿಳಾ ಸದಸ್ಯರನ್ನಾಧರಿಸಿ ಅನುಷಂಗಿಕ ಆಕರಗಳನ್ನು ಸಂಗ್ರಹಿಸಿಕೊಂಡು, ಅಧ್ಯಯನಕ್ಕೆ ಪೂರಕವಾಗುವಂತೆ, ಸ್ತ್ರೀವಾದಿ ನೆಲೆಯಲ್ಲಿ ವಿಶ್ಲೇಷಣೆಯನ್ನು ಮಾಡಲಾಗಿದೆ. ಇದಕ್ಕೆ ಸಂಬಂಧಪಟ್ಟಂತ ಅಂಶಗಳನ್ನು ಪ್ರಸ್ತುತ ಅಧ್ಯಯನದಲ್ಲಿ ದಾಖಲಿಸಿ, ವಿಶ್ಲೇಷಿಸಿಕೊಳ್ಳಲಾಗಿದೆ.

ರಾಜಕೀಯ ಸಾಮಾಜೀಕರಣದಲ್ಲಿ ಮಹಿಳೆ ರಾಜಕೀಯ ಸಂಸ್ಕೃತಿಗೆ ಪ್ರವೇಶಿಸಲು, ರಾಜಕೀಯ ಉದ್ದೇಶದ ಬಗೆಗೆ ಮನೋಧರ್ಮವನ್ನು ರೂಪಿಸಲು ಮತ್ತು ಮಹಿಳೆಗೆ ರಾಜಕೀಯ ಪ್ರವೇಶಕ್ಕೆ ಕಲಿಕೆಯ ಭಾಗವಾಗಿ ಸಹಾಯಕವಾಗುತ್ತದೆ. ಜೊತೆಗೆ ಮಹಿಳೆಗೆ ರಾಜಕೀಯ ಸಾಮಾಜೀಕರಣ 'ರಾಜಕೀಯ' ಕುರಿತಂತೆ ಮಹಿಳೆಗೆ ಅತ್ಯುತಮ ಕಾರ್ಯಕರ್ತ ಅಥವಾ ಸದಸ್ಯರಾಗಿ ರೂಪಿಸುವುದಾಗಿದೆ. ಈ ರಾಜಕೀಯ ಸಾಮಾಜೀಕರಣ ಮಹಿಳೆಗೆ ರೂಪಿತಗೊಳ್ಳಬೇಕಾದರೇ ಸಮಾಜದಲ್ಲಿನ ಕೆಲವು ನಿಯೋಗಗಳ (Agenic) ಪಾತ್ರವಿದೆ ಅವುಗಳೆಂದರೆ, ಕುಟುಂಬ, ನೆರೆಹೊರೆ, ಸ್ನೇಹಿತರು, ಶೈಕ್ಷಣಿಕ ಗುಂಪುಗಳು, ಒತ್ತಡದ ಅಥವಾ ಹಿತಾಸಕ್ತಿ ಗುಂಪುಗಳು, ಸಂವಹನ ಮಾಧ್ಯಮಗಳು, ಆನುಷಂಗಿಕ ಗುಂಪುಗಳು (ರಾಜಕೀಯ ಪಕ್ಷಗಳು ಅಥವಾ ರಾಜಕೀಯ ಯುವ ಸಂಘಟನೆಗಳು) ಮತ್ತು ಸಮುದಾಯಗಳಿಂದ ಸಂಗ್ರಹಿಸಿಕೊಂಡ ಅನುಭವಗಳು ಮುಖ್ಯವಾಗುತ್ತವೆ. ಆದರೆ ಪುರುಷ ಮತ್ತು ಪಿತೃಪ್ರಧಾನ ಮೌಲ್ಯಗಳಿಂದಾಗಿ ಮಹಿಳೆ ಕೌಟುಂಬಿಕ ವಲಯದಲ್ಲಿ ರಾಜಕೀಯ ಸಾಮಾಜೀಕರಣ ದೊರೆಯದೆ ಇರುವುದು ಮತ್ತು ಸಾರ್ವಜನಿಕ ಸಂಪರ್ಕದ ಕೊರತೆಯನ್ನು ಅನುಭವಿಸುತ್ತಿರುವುದು ಕಂಡುಬರುತ್ತದೆ.

ಇದರಿಂದ 'ರಾಜಕೀಯದಲ್ಲಿ ಮಹಿಳಾ ಸಹಭಾಗಿತ್ವ'ದ ಕೊರತೆ ಕಂಡು ಬರಲು ಕಾರಣವಾಗುತ್ತಿದೆ. ಈ ಹಿನ್ನಲೆಯಿಂದ ಇಲ್ಲಿ ರಾಜಕೀಯ ಸಾಮಾಜೀಕರಣ ರೂಪಿಸುವ ನಿಯೋಗಗಳ ಕುರಿತಂತೆ ನೋಡಿದರೆ ಮೊದಲಿಗೆ ಕುಟುಂಬವು ಕಂಡುಬರುತ್ತದೆ. ಮಹಿಳೆಗೆ ರಾಜಕೀಯ ಸಾಮಾಜೀಕರಣ ರೂಪಿಸುವಲ್ಲಿ ಕುಟುಂಬದ ಪಾತ್ರ ಮಹತ್ವದ್ದು. ಮಹಿಳೆಗೆ ಕುಟುಂಬದ ಪರಿಸರವು ಬಿರುವ ಪ್ರಭಾವವು ಅವಳ ರಾಜಕೀಯ ಜೀವನವನ್ನು ನಿರ್ಧರಿಸುತ್ತದೆ. ಆದರೆ ಸಾಮಾಜಿಕ ಸಂಸ್ಥೆಯಾದ ಕುಟುಂಬದೊಳಗೆ ಮಹಿಳೆಗೆ

ಸಂಬಂಧಗಳ ಪಾತ್ರಗಳಾದ ಅತ್ತೆ, ಭಾವ, ಮೈದುನ, ನಾದಿನಿ, ಅಕ್ಕ–ತಂಗಿ, ಅಣ್ಣ–ತಮ್ಮ. ಹೀಗೆ ಕೌಟುಂಬಿಕ ಸಂಬಂಧದೊಳಗೆ ಬಂದಿಯಾಗಿರುವುದರಿಂದ ಆಕೆ ಕೌಟುಂಬಿಕದ ಆಚೆಗೆ ಹೊರಬರದಂತೆ ಸ್ಥಿರಗೊಳಿಸಲಾಗಿದೆ. ಮಕ್ಕಳ ಪಾಲನೆ, ಪೋಷಣೆ, ರಕ್ಷಣೆ ಜೊತೆಗೆ ಇತರ ಗೃಹಕೃತ್ಯಗಳ ಸಂಗತಿಗಳ ಅನುಭವವನ್ನು ಕೊಡಿಸಲಾಗಿರುವುದು ಕಂಡು ಬರುತ್ತದೆ. ಹೀಗಾಗಿ ಮಹಿಳೆಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕುಟುಂಬದೊಳಗೆ ಮಹಿಳೆಗೆ ರಾಜಕೀಯ ಸಾಮಾಜೀಕರಣ ದೊರೆಯದೆ ಇರುವುದರಿಂದ ರಾಜಕೀಯದಲ್ಲಿ ಮಹಿಳಾ ಸಹಭಾಗಿತ್ವಕ್ಕೆ ತೊಡಕುಂಟಾಗುತ್ತಿದೆ.

ರಾಜಕೀಯ ಸಾಮಾಜೀಕರಣದಲ್ಲಿ ಕುಟುಂಬದಷ್ಟೇ ಪರಿಣಾಮ ಬೀರುವ ಮತ್ತೊಂದು ನಿಯೋಗವೆಂದರೆ ಅದು ಸಮಾನ ತಂಡಗಳು ಅಥವಾ ಗೆಳೆಯರ ಬಳಗ ಇಲ್ಲಿ ವ್ಯಕ್ತಿಗೆ ರಾಜಕೀಯ ಸಂಗತಿಗಳನ್ನು ತಿಳಿಯಲು, ರಾಜಕೀಯ ಅನುಭವವನ್ನು ಪಡೆಯಲು ಮತ್ತು ಪರಸ್ಪರ ಒಬ್ಬರ ಮೇಲೊಬ್ಬರ ಪ್ರಭಾವಕ್ಕೆ ಒಳಗಾಗುವಲ್ಲಿ ಅತ್ಯಂತ ಮಹತ್ವ ಕೆಲಸವನ್ನು ಈ ಸಮಾನ ತಂಡಗಳು ಕೆಲಸ ನಿರ್ವಹಿಸುತ್ತವೆ. ಆದರೆ ಮಹಿಳೆಯರ ಸಮಾನ ತಂಡಗಳಲ್ಲಿ ಖಾಸಗಿ ಜೀವನದ ಸಂಗತಿಗಳೆ ಚರ್ಚೆಗೆ ಬರುವುದರಿಂದ ಇಲ್ಲಿಯು ಮಹಿಳೆಗೆ ರಾಜಕೀಯ ಸಾಮಾಜೀಕರಣ ದೊರೆಯುವಲ್ಲಿ ವಿಫಲತೆ ಕಂಡು ಬರುತ್ತದೆ. ರಾಜಕೀಯ ಸಾಮಾಜೀಕರಣದಲ್ಲಿ ಶಿಕ್ಷಣ ಸಂಸ್ಥೆಗಳು ಮಹತ್ವವಿದೆ. ಅದರಲ್ಲಿ ಶಾಲೆಗಳು, ಕಾಲೇಜುಗಳು, ವಿಶ್ವವಿದ್ಯಾಲಯಗಳು, ವ್ಯಕ್ತಿಗೆ ರಾಜಕೀಯ ಸಾಮಾಜೀಕರಣ ರೂಪಿಸಲು ನೇರವಾಗುತ್ತಿವೆ. ಈ ಹಿನ್ನೆಲೆಯಿಂದ ಮಹಿಳೆಯ ರಾಜಕೀಯ ಸಾಮಾಜೀಕರಣಕ್ಕೆ ಶಿಕ್ಷಣ ಸಂಸ್ಥೆಗಳ ಕುರಿತಂತೆ ಇಲ್ಲಿ ಚರ್ಚೆಗೆ ಒಳಪಡಿಸಿದರೆ. ರಾಜಕೀಯ ಪಕ್ಷಗಳು ಮತ್ತು ಸರಕಾರಗಳು ಬಹುತೇಕ ರಾಷ್ಟ್ರಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಅಂಕೆಯಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸುತ್ತವೆ. ಇವುಗಳಿಗೆ ಆರ್ಥಿಕ ನೆರವು ಕೊಡುವುದು ಮತ್ತು ಇತರ ವಿಧಾನಗಳ ಮೂಲಕ ಹತೋಟಿಗೆ ಇಟ್ಟುಕೊಳ್ಳುವ ಕೆಲಸ ಮಾಡುತ್ತಿವೆ. ಶಿಕ್ಷಣ ಸಂಸ್ಥೆಗಳು ರಾಜಕೀಯ ಸಂಸ್ಕೃತಿಯನ್ನು ಪ್ರಚಾರ ಮಾಡಲು ಇವು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಾಯಕವಾಗಿವೆ.

ಮಹಿಳೆಯರ ರಾಜಕೀಯ ಸಾಮಾಜೀಕರಣ ರೂಪಿಸುವಲ್ಲಿ ಒತ್ತಡ ಅಥವಾ ಹಿತ್ತಾಶಕ್ತಿ ಗುಂಪುಗಳಾದ ಲೇಬರ್ ಯುನಿಯನ್, ವಿದ್ಯಾರ್ಥಿ ಸಂಘಗಳು, ಕಾರ್ಮಿಕ ಸಂಘಗಳು, ಜಾತಿ ಸಂಘಟನೆಗಳು ಇವು ಮುಖ್ಯವಾಗಿ ರಾಜಕೀಯ ಲಕ್ಷ್ಯಗಳನ್ನು ಸಾಧಿಸಿಕೊಳ್ಳುವುದು, ರಾಜಕೀಯ ವಿಚಾರಗಳನ್ನು, ಮೌಲ್ಯಗಳನ್ನು ಪ್ರಸಾರ ಮಾಡುವುದು ರಾಜಕೀಯ ನಾಯಕರಿಗೆ ತರಬೇತಿ ಕೊಡುವುದು, ಅನಂತರ ಅವರನ್ನು ರಾಜಕೀಯ ಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳಲು ಸಿದ್ಧತೆ ನಡೆಸುವುದಕ್ಕೆ ಕಾರಣವಾಗುತ್ತಿವೆ. ಆದರೆ ಸಂಘಟನೆ ಕುರಿತು ಅಭಿಪ್ರಾಯವನ್ನು ಹಂಚಿಕೊಳ್ಳಲು, ಬೇಡಿಕೆಯನ್ನು ಸರಕಾರದ ಮುಂದೆ ಇಡಲು, ಭಾಷಣ ಮಾಡಲು, ನಾಯಕತ್ವವನ್ನು ಪ್ರದರ್ಶಿಸುವ ಯಾವ ಚಟುವಟಿಕೆಯನ್ನು ಮಾಡಲು ಇಲ್ಲಿ ಮಹಿಳೆಯರಿಗೆ ಅವಕಾಶ ಅಷ್ಟಾಗಿ ನೀಡದೇ ಇರುವುದು ಕಂಡು ಬರುತ್ತದೆ. ಇದರಿಂದ ಮಹಿಳೆಯರಿಗೆ ಒತ್ತಡ ಅಥವಾ ಹಿತಾಸಕ್ತಿ ಗುಂಪುಗಳಿಂದ ಮಹಿಳೆಯರ ರಾಜಕೀಯ ಸಾಮಾಜೀಕರಣಕ್ಕೆ ಪೂರಕವಾದ ವಾತಾವರಣ ಇಲ್ಲಿ ಕಂಡು ಬರುವುದುದಿಲ್ಲ. ಇದಲ್ಲದೆ ಮಹಿಳೆಯರೆ ಸ್ಥಾಪಿಸಿಕೊಂಡಿರುವ, ಮಹಿಳೆಯರೆ ನಿರ್ವಹಿಸುತ್ತಿರುವ ಅನೇಕ ಸಂಘ/ಸಂಘಟನೆಗಳಿವೆ.

ಹೀಗೆ ಅನೇಕ ತರದಲ್ಲಿ ಮಹಿಳಾ ಒತ್ತಡ ಗುಂಪುಗಳು ಇದ್ದರು, ಇದಕ್ಕೆಲ್ಲ ಮಹಿಳೆಯರಗೆ ಮುಂಖಡರೇ ಆಗಿದ್ದರು. ಸರಕಾರ ಇವರ ಒತ್ತಡಕ್ಕೆ ಅಥವಾ ಹಿತಾಸಕ್ತಿಗೆ ಕೆಲವೊಮ್ಮೆ ಕಿವಿಗೊಡದೇ ಇರುವುದು ಕಂಡು ಬರುತ್ತದೆ. ಹೀಗಿರುವಾಗ ಮಹಿಳೆಯ ಪರಿಪೂರ್ಣವಾಗಿ ರಾಜಕೀಯ ಸಾಮಾಜೀಕರಣ ರೂಪಿಸಲು ಸಾಧ್ಯವಾಗದೆ ಉಳಿದು ಕೊಂಡಿರುವುದು ಕಂಡುಬರುತ್ತದೆ.

ಇದರೊಂದಿಗೆ ಮಾನ ಮಾರ್ಯದೆ, ಶೀಲ–ಆಶ್ಲೀಲ, ನಯ–ವಿನಯತೆ, ಭಯ–ಭಕ್ತಿ, ಗೌರವ–ಅಗೌರ, ನಡೆ–ನುಡಿ, ಸಂಸ್ಕೃತಿಗೆ ಸಂಬಂದಿಸಿದ ಸಂಗತಿಗಳು, ಪುರುಷ ಪ್ರಧಾನ ಮೌಲ್ಯಗಳು ಮಹಿಳೆಗೆ ಅಡ್ಡಿ ಆತಂಕಗಳನ್ನು ತಂದೊಡ್ಡಿವೆ. ಈ ಕಾರಣದಿಂದ ಮಹಿಳೆ ಸಾರ್ವಜನಿಕ ಸಂಪರ್ಕ ಸಾಧಿಸುವುದು ಮತ್ತು ರಾಜಕೀಯ ಸಾಮಾಜೀಕರಣಕ್ಕೆ ಒಳಗಾಗುವ ಕಷ್ಟ ಸಾಧ್ಯವಾಗಿದೆ.

ಇವೆಲ್ಲ ಅಡ್ಡಿ–ಆತಂಕಗಳ ನಡುವೆ ರಾಜಕೀಯ ಸಾಮಾಜೀಕರಣ ರೂಪಿತಗೊಳ್ಳುವಲ್ಲಿ ಸಮೂಹ ಸಂಪರ್ಕ ಮಾಧ್ಯಮಗಳು ಸಾಮಾಜಿಕ ಜಾಲತಾಣಗಳಲ್ಲಿ ಗಮನಾರ್ಹವಾದ ಬದಲಾವಣೆಯಾಗಿದೆ. ವಾಟ್ಸ್‌ಆಪ್, ಟ್ವೀಟರ್, ಫೇಸ್‌ಬುಕ್, ಟೆಲಿಗ್ರಾಮ ವಿಚಾರಗಳು ಗಂಭೀರತೆ ಪಡೆದುಕೊಳ್ಳುತ್ತಿವೆ. ಇದರಿಂದ ಸಮೂಹ ಸಂಪರ್ಕ ಮಾಧ್ಯಮಗಳನ್ನು 'ಬದಲಾವಣೆಯ ಹರಿಕಾರಗಳು' ಎಂದು ಭಾವಿಸಲಾಗುತ್ತದೆ. ಆದರೆ ಸಾಮಾಜಿಕ ಮಾಧ್ಯಮಗಳನ್ನು ಬಳಸುವ ಮಹಿಳೆಯರ ಪ್ರಮಾಣ ಕಡಿಮೆ ಇದೆ.

ರಾಜಕೀಯದಲ್ಲಿ ಮಹಿಳಾ ಸಹಭಾಗಿತ್ವಕ್ಕೆ ಪಕ್ಷಗಳ ಪಾತ್ರ ದೊಡ್ಡದು. ಈ ರಾಜಕೀಯ ಪಕ್ಷಗಳು ಸರಕಾರವನ್ನು ರಚಿಸಿ ಆಳ್ವಿಕೆಯನ್ನು ಮಾಡುತ್ತವೆ. ಈ ರಾಜಕೀಯ ಪಕ್ಷಗಳು ಸಂಘಟನಾತ್ಮಕವಾಗಿ ರಾಷ್ಟ್ರೀಯ, ವಿಭಾಗೀಯ, ರಾಜ್ಯ, ಜಿಲ್ಲಾ, ತಾಲೂಕು, ಹೋಬಳಿ, ಗ್ರಾಮ ಮಟ್ಟದವರೆಗೆ ಸಂಘಟನೆಗೊಳ್ಳುತ್ತವೆ. ಜೊತೆಗೆ ಧರ್ಮ, ಜಾತಿ ಅಧಾರಿತವಾಗಿ ಸಂಘಟನೆಯನ್ನು ಮಾಡುತ್ತವೆ. ಹೀಗಿರುವಾಗ ರಾಜಕೀಯ ಪಕ್ಷಗಳು ಕೇವಲ ಪುರುಷ ಸೀಮಿತವಾಗಿ ಮುಂದುವರೆದು ಮಹಿಳೆಯನ್ನು ನಾಮ ಮಾತ್ರವಾಗಿ ಬಳಸಿಕೊಂಡು ಮುಂದುವರೆಯುತ್ತಿರುವುದು ಕಂಡುಬರುತ್ತದೆ. ಇದಕ್ಕೆ ದೇಶದಲ್ಲಿ ಅನೇಕ ರಾಜಕೀಯ ಪಕ್ಷಗಳನ್ನು ಉಲ್ಲೇಖಿಸಬಹುದಾಗಿದೆ. ಆದರೆ ಮಹಿಳೆಗೆ ರಾಜಕೀಯ ಸಹಭಾಗಿತ್ವದಂಥಹ ವಿಷಯ ಬಂದಾಗ ರಾಜಕೀಯ ಮೀಸಲಾತಿಯ ಕುರಿತು ಚರ್ಚಿಸಿ ಮಹಿಳೆಯರನ್ನು ಕೇವಲ ಮತಬ್ಯಾಂಕ್ ಆಗಿ ಪರಿವರ್ತಿಸುತ್ತಿರುವುದು ಕಂಡು ಬರುತ್ತದೆ.

ಈ ಕುರಿತಂತೆ ಅನೇಕ ಮೀಸಲಾತಿಯ ವಿದ್ಯಾಮಾನಗಳು, ರಾಷ್ಟ್ರ, ರಾಜ್ಯಮಟ್ಟದಲ್ಲಿ ಮಂತ್ರಿಗಳಾಗಿ ಪ್ರತಿನಿಧಿಸುವ ಮಹಿಳೆಯರನ್ನು ಗಮನಿಸಬಹುದು, ರಾಜ್ಯಗಳ ವಿಧಾನಸಭೆ, ವಿಧಾನಪರಿಷತ್, ಲೋಕಸಭೆ, ರಾಜ್ಯ ಸಭೆಗಳಲ್ಲಿನ ಮಹಿಳೆಯರ ಪ್ರಾತಿನಿಧ್ಯವನ್ನು ಗಮನಿಸಿದರೆ ತಿಳಿದು ಬರುತ್ತದೆ. ಕುಟುಂಬದ ಜೊತೆಗೆ ಸಾಮಾಜಿಕ ಸಂಘಟನೆಗಳು ರಾಜಕೀಯ ಸಾಮಾಜೀಕರಣಕ್ಕೆ ನೆರವಾಗುತ್ತವೆ. ಬಹುಜಾತಿ ಸಮಾಜಗಳಲ್ಲಿ ಜಾತಿ ಸಂಘನೆಗಳು ಮತ್ತು ಯುವ ಸಂಘಟನೆಗಳು ರಾಜಕೀಯ ವ್ಯವಸ್ಥೆಯನ್ನು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಬಲಗೊಳಿಸುತ್ತವೆ. ಆದರೆ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯು ಮಹಿಳೆಯ ಭಾಗವಹಿಸುವಿಕೆ ಸಾಮಾಜೀಕರಣದಿಂದ ಹೊರಗಿಟ್ಟಿದೆ.

ಮಹಿಳೆಗೆ ಶಿಕ್ಷಣ, ಆರ್ಥಿಕ ಸ್ವತಂತ್ರ, ಮುಕ್ತ ವಾತಾವರಣ, ಬೌದ್ಧಿಕಶಕ್ತಿ, ನಾಯಕತ್ವದ ಗುಣಗಳು, ನಿರ್ಧಿಷ್ಟ ಗುರಿಯ ಕಡೆಗೆ ತಮ್ಮ ಜನರನ್ನು ಅಥವಾ ಅನುಯಾಯಿಗಳನ್ನು ಕರೆದೊಯ್ಯುವ ಸಾಮರ್ಥ್ಯ ಇವುಗಳನ್ನು ಹೊಂದಿರಬೇಕು ಈ ಅಂಶಗಳು ರಾಜಕೀಯ ಸಹಭಾಗಿತ್ವಕ್ಕೆ ಸಹಕಾರಿಯಾಗುತ್ತದೆ.

**ಕೋಷ್ಟಕ:1 ರಾಯಚೂರು ಜಿಲ್ಲೆಯಿಂದ 1957–2018ರ ವರೆಗೆ ವಿಧಾನ ಸಭೆಗೆ ಆಯ್ಕೆಗೊಂಡ ಮಹಿಳೆ ಮತ್ತು ಪುರುಷರ ವಿವರ**

| ಕ್ರ.ಸಂ. | ವಿಧಾನ ಸಭಾ ಕ್ಷೇತ್ರ | ವರ್ಷ | ಗೆದ್ದ ಅಭ್ಯರ್ಥಿ ಲಿಂಗ, ಜಾತಿ ಮತ್ತು ರಾಜಕೀಯ ಪಕ್ಷ | | | ಪ್ರತಿಸ್ಪರ್ಧಿ ಲಿಂಗ | ಪಕ್ಷ |
|---|---|---|---|---|---|---|---|
| 1 | ರಾಯಚೂರು | 1957 | ಗಂಡು | ಪ.ಜಾ | INC | ಗಂಡು | IND |
| | ಮಾನ್ವಿ | | ಗಂಡು | ಸಾಮಾನ್ಯ | INC | ಗಂಡು | IND |
| | ಸಿಂಧನೂರು | | ಗಂಡು | ಸಾಮಾನ್ಯ | INC | ಗಂಡು | IND |
| | ಲಿಂಗಸುಗೂರು | | ಗಂಡು | ಸಾಮಾನ್ಯ | INC | ಗಂಡು | IND |
| | ದೇವದುರ್ಗಾ | | ಗಂಡು | ಸಾಮಾನ್ಯ | INC | ಗಂಡು | IND |
| 2 | ರಾಯಚೂರು | 1962 | ಗಂಡು | ಸಾಮಾನ್ಯ | INC | ಗಂಡು | LSS |
| | ಮಾನ್ವಿ | | ಹೆಣ್ಣು | ಸಾಮಾನ್ಯ | INC | ಗಂಡು | SWA |
| | ಸಿಂಧನೂರು | | ಗಂಡು | ಸಾಮಾನ್ಯ | INC | ಗಂಡು | LSS |
| | ಲಿಂಗಸುಗೂರು | | ಗಂಡು | ಸಾಮಾನ್ಯ | LSS | ಗಂಡು | INC |
| | ದೇವದುರ್ಗಾ | | ಗಂಡು | ಸಾಮಾನ್ಯ | INC | ಗಂಡು | LSS |
| | ಮಸ್ಕಿ | | | | | | |
| 3 | ರಾಯಚೂರು | 1967 | ಗಂಡು | ಸಾಮಾನ್ಯ | SSP | ಗಂಡು | INC |
| | ಮಾನ್ವಿ | | ಗಂಡು | ಸಾಮಾನ್ಯ | INC | ಗಂಡು | IND |
| | ಸಿಂಧನೂರು | | ಗಂಡು | ಸಾಮಾನ್ಯ | IND | ಗಂಡು | INC |
| | ಲಿಂಗಸುಗೂರು | | ಗಂಡು | ಸಾಮಾನ್ಯ | INC | ಗಂಡು | SWA |
| | ದೇವದುರ್ಗಾ | | ಗಂಡು | ಸಾಮಾನ್ಯ | SWA | ಗಂಡು | INC |
| | ಮಸ್ಕಿ | | | | | | |
| 4 | ರಾಯಚೂರು | 1972 | ಗಂಡು | ಸಾಮಾನ್ಯ | INC | ಗಂಡು | NCO |
| | ಮಾನ್ವಿ | | ಗಂಡು | ಸಾಮಾನ್ಯ | INC | ಗಂಡು | NCO |

| | | | | | | | |
|---|---|---|---|---|---|---|---|
| | ಸಿಂಧನೂರು | | ಗಂಡು | ಸಾಮಾನ್ಯ | INC | ಗಂಡು | CPM |
| | ಲಿಂಗಸುಗೂರು | | ಗಂಡು | ಸಾಮಾನ್ಯ | INC | ಗಂಡು | NCO |
| | ದೇವದುರ್ಗಾ | | ಗಂಡು | ಸಾಮಾನ್ಯ | NCO | ಗಂಡು | INC |
| | ಮಸ್ಕಿ | | | | | | |
| 5 | ರಾಯಚೂರು | 1978 | ಗಂಡು | ಸಾಮಾನ್ಯ | INC | ಗಂಡು | IND |
| | ಮಾನ್ವಿ | | ಗಂಡು | ಸಾಮಾನ್ಯ | INC | ಗಂಡು | JNP |
| | ಸಿಂಧನೂರು | | ಗಂಡು | ಸಾಮಾನ್ಯ | INC | ಗಂಡು | INC |
| | ಲಿಂಗಸುಗೂರು | | ಗಂಡು | ಸಾಮಾನ್ಯ | INC | ಗಂಡು | JNP |
| | ದೇವದುರ್ಗಾ | | ಗಂಡು | ಪ.ಜಾ | INC | ಗಂಡು | JNP |
| | ಮಸ್ಕಿ | | | | | | |
| 6 | ರಾಯಚೂರು | 1983 | ಗಂಡು | ಸಾಮಾನ್ಯ | JNP | ಗಂಡು | INC |
| | ಮಾನ್ವಿ | | ಗಂಡು | ಸಾಮಾನ್ಯ | INC | ಗಂಡು | JNP |
| | ಸಿಂಧನೂರು | | ಗಂಡು | ಸಾಮಾನ್ಯ | IND | ಗಂಡು | INC |
| | ಲಿಂಗಸುಗೂರು | | ಗಂಡು | ಸಾಮಾನ್ಯ | INC | ಗಂಡು | BJP |
| | ದೇವದುರ್ಗಾ | | ಗಂಡು | ಪ.ಜಾ | INC | ಗಂಡು | JNP |
| | ಮಸ್ಕಿ | | | | | | |
| 7 | ರಾಯಚೂರು | 1985 | ಗಂಡು | ಸಾಮಾನ್ಯ | INC | ಗಂಡು | JNP |
| | ಮಾನ್ವಿ | | ಗಂಡು | ಸಾಮಾನ್ಯ | JNP | ಗಂಡು | INC |
| | ಸಿಂಧನೂರು | | ಗಂಡು | ಸಾಮಾನ್ಯ | INC | ಗಂಡು | JNP |
| | ಲಿಂಗಸುಗೂರು | | ಗಂಡು | ಸಾಮಾನ್ಯ | JNP | ಗಂಡು | INC |
| | ದೇವದುರ್ಗಾ | | ಹೆಣ್ಣು | ಪ.ಜಾ | JNP | ಗಂಡು | INC |
| | ಮಸ್ಕಿ | | | | | | |
| 8 | ರಾಯಚೂರು | 1989 | ಗಂಡು | ಸಾಮಾನ್ಯ | JD | ಗಂಡು | INC |
| | ಮಾನ್ವಿ | | ಗಂಡು | ಸಾಮಾನ್ಯ | IND | ಗಂಡು | INC |
| | ಸಿಂಧನೂರು | | ಗಂಡು | ಸಾಮಾನ್ಯ | JD | ಗಂಡು | INC |
| | ಲಿಂಗಸುಗೂರು | | ಗಂಡು | ಸಾಮಾನ್ಯ | INC | ಗಂಡು | JD |

| | | | | | | | |
|---|---|---|---|---|---|---|---|
| | ದೇವದುರ್ಗಾ | | ಗಂಡು | ಪ.ಜಾ | INC | ಗಂಡು | JNP |
| | ಮಸ್ಕಿ | | | | | | |
| 9 | ರಾಯಚೂರು | 1994 | ಗಂಡು | ಸಾಮಾನ್ಯ | JD | ಗಂಡು | INC |
| | ಮಾನ್ವಿ | | ಗಂಡು | ಸಾಮಾನ್ಯ | JD | ಗಂಡು | INC |
| | ಸಿಂಧನೂರು | | ಗಂಡು | ಸಾಮಾನ್ಯ | INC | ಗಂಡು | JD |
| | ಲಿಂಗಸುಗೂರು | | ಗಂಡು | ಸಾಮಾನ್ಯ | JD | ಗಂಡು | INC |
| | ದೇವದುರ್ಗಾ | | ಹೆಣ್ಣು | ಪ.ಜಾ | JD | ಗಂಡು | KCP |
| | ಮಸ್ಕಿ | | | | | | |
| 10 | ರಾಯಚೂರು | 1999 | ಗಂಡು | ಸಾಮಾನ್ಯ | INC | ಗಂಡು | BJP |
| | ಮಾನ್ವಿ | | ಗಂಡು | ಸಾಮಾನ್ಯ | INC | ಗಂಡು | BJP |
| | ಸಿಂಧನೂರು | | ಗಂಡು | ಸಾಮಾನ್ಯ | JDU | ಗಂಡು | INC |
| | ಲಿಂಗಸುಗೂರು | | ಗಂಡು | ಸಾಮಾನ್ಯ | JDU | ಗಂಡು | INC |
| | ದೇವದುರ್ಗಾ | | ಗಂಡು | ಪ.ಜಾ | INC | ಗಂಡು | JDU |
| | ಮಸ್ಕಿ | | | | | | |
| 11 | ರಾಯಚೂರು | 2004 | ಗಂಡು | ಸಾಮಾನ್ಯ | BJP | ಗಂಡು | INC |
| | ಮಾನ್ವಿ | | ಗಂಡು | ಸಾಮಾನ್ಯ | INC | ಗಂಡು | IND |
| | ಸಿಂಧನೂರು | | ಗಂಡು | ಸಾಮಾನ್ಯ | INC | ಗಂಡು | JDS |
| | ಲಿಂಗಸುಗೂರು | | ಗಂಡು | ಸಾಮಾನ್ಯ | JDS | ಗಂಡು | INC |
| | ದೇವದುರ್ಗಾ | | ಗಂಡು | ಪ.ಜಾ | JDS | ಗಂಡು | IND |
| | ಮಸ್ಕಿ | | | | | | |
| 12 | ರಾಯಚೂರು | 2008 | ಗಂಡು | ಸಾಮಾನ್ಯ | INC | ಗಂಡು | JDS |
| | ಮಾನ್ವಿ | | ಗಂಡು | ಪ.ಪಂ | INC | ಗಂಡು | BJP |
| | ಸಿಂಧನೂರು | | ಗಂಡು | ಸಾಮಾನ್ಯ | JDS | ಗಂಡು | INC |
| | ಲಿಂಗಸುಗೂರು | | ಗಂಡು | ಪ.ಜಾ | BJP | ಗಂಡು | INC |
| | ದೇವದುರ್ಗಾ | | ಗಂಡು | ಪ.ಪಂ | JDS | ಗಂಡು | INC |
| | ಮಸ್ಕಿ | | ಗಂಡು | ಪ.ಪಂ | BJP | ಗಂಡು | INC |

| | | | | | | | |
|---|---|---|---|---|---|---|---|
| 13 | ರಾಯಚೂರು | 2013 | ಗಂಡು | ಸಾಮಾನ್ಯ | JDS | ಗಂಡು | INC |
| | ಮಾನ್ವಿ | | ಗಂಡು | ಪ.ಪಂ | INC | ಗಂಡು | JDS |
| | ಸಿಂಧನೂರು | | ಗಂಡು | ಸಾಮಾನ್ಯ | INC | ಗಂಡು | BSRCP |
| | ಲಿಂಗಸುಗೂರು | | ಗಂಡು | ಪ.ಜಾ | JDS | ಗಂಡು | INC |
| | ದೇವದುರ್ಗಾ | | ಗಂಡು | ಪ.ಪಂ | INC | ಗಂಡು | BJP |
| | ಮಸ್ಕಿ | | | | | | |
| 14 | ರಾಯಚೂರು | 2018 | ಗಂಡು | ಸಾಮಾನ್ಯ | JDS | ಗಂಡು | INC |
| | ಮಾನ್ವಿ | | ಗಂಡು | ಪ.ವ | JDS | ಗಂಡು | INC |
| | ಸಿಂಧನೂರು | | ಗಂಡು | ಸಾಮಾನ್ಯ | JDS | ಗಂಡು | INC |
| | ಲಿಂಗಸುಗೂರು | | ಗಂಡು | ಸಾಮಾನ್ಯ | JDS | ಗಂಡು | INC |
| | ದೇವದುರ್ಗಾ | | ಗಂಡು | ಪ.ವ | BJP | ಗಂಡು | INC |
| | ಮಸ್ಕಿ | | ಗಂಡು | ಪ.ವ | INC | ಗಂಡು | KJP |

ಈ ಮೇಲಿನ ಕೊಷ್ಟಕದಲ್ಲಿನ ಅನುಷಂಗಿಕ ಆಕರಗಳನ್ನು ಗಮನಿಸಿದರೆ, ರಾಜಕೀಯದಲ್ಲಿ ಮಹಿಳಾ ಸಹಭಾಗಿತ್ವ ಕೊರತೆ ಹಾಗೂ ರಾಜಕೀಯ ಸಾಮಾಜೀಕರಣದ ಕೊರತೆ ಎದ್ದು ಕಾಣುತ್ತದೆ. ಏಕೆಂದರೆ 1957 ರಿಂದ 2018 ಚುನಾವಣೆವರೆಗೂ ದೊರೆಯುವ ಲೋಕಸಭೆ, ವಿಧಾನಸಭೆ, ವಿಧಾನಪರಿಷತ್ ಚುನಾವಣೆ ನಡೆಯುತ್ತಲೇ ಬಂದಿದೆ. ಆದರೆ ವಿಧಾನ ಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದ ಮಹಿಳೆಯರ ಪ್ರಮಾಣ ಕೇವಲ 3 ಮಾತ್ರ. ಪುರಷ ಪ್ರಧಾನತೆ, ಪಿತೃ ಪ್ರಧಾನತೆ, ಸಮಾಜದಲ್ಲಿನ ಲಿಂಗತಾರತ್ಯದ ಭಾವನೆ, ಸಂಪ್ರದಾಯ ಆಚರಣೆ, ಧರ್ಮ–ನಂಬಿಕೆ, ಕುಟುಂಬ, ಮಹಿಳೆಯರಿಗೆ ನೀಡಿರುವ ಸಾಮಾಜೀಕರಣ ಹೀಗೆ ಅನೇಕ ಸಂಗತಿಗಳನ್ನು ಪಟ್ಟಿಮಾಡಬಹುದು. ಆದರೆ ಇಲ್ಲಿ ರಾಜಕೀಯ ಮೀಸಲಾತಿಯ ಪ್ರಶ್ನೆ ಮಾತ್ರ ಮುನ್ನಲೆಗೆ ಬರುತ್ತದೆಯೇ ಹೊರತು. ಮಹಿಳೆಯರಿಗೆ ಸಂವಿಧಾನ ಕಲ್ಪಿಸಿಕೊಟ್ಟ ಸಮಾನತೆ ಪ್ರಶ್ನೆ ಹಾಗೆ ಹಿಂದಕ್ಕೆ ಉಳಿದು ಬಿಡುತ್ತದೆ. ರಾಜಕೀಯ ಕ್ಷೇತ್ರದಲ್ಲಿ ಮಾತ್ರ ಮೀಸಲಾತಿ ಪ್ರಶ್ನೆ ಎತ್ತುವಂತಹ ಅಥವಾ ಮೀಸಲಾತಿ ಆಧರಿಸಿ ಮಹಿಳೆಯನ್ನು ಬೆಳೆಸುವ ಈ ಪುರುಷ ಪ್ರಧಾನ ಸಾಮಾಜೀಕರಣ ಇದು ಮಹಿಳೆಯರಿಗೆ ಮಾಡುವ ಅನ್ಯಾಯ, ತಾರತಮ್ಯವಾಗಿ ಉಳಿಯುತ್ತದೆ. ಇದನ್ನು ನಾವು ರಾಜಕೀಯದಲ್ಲಿ ಮಹಿಳೆ ಸಹಭಾಗಿತ್ವ ಕುರಿತಂತೆ ಅನೇಕ ನೆಲೆಯಲ್ಲಿ ಅಥವಾ ಆಯಾಮಗಳಲ್ಲಿ ಅಧ್ಯಯನಿಸಬೇಕಾಗಿದೆ.

ಮೇಲಿನ ಅಂಶಗಳನ್ನು ಗಮನಿಸಿದಾಗ ಮಹಿಳೆಯರ ರಾಜಕೀಯ ಸಹಭಾಗಿತ್ವಕ್ಕೆ ಯಾವುದೇ ರಾಜಕೀಯ ಪಕ್ಷಗಳು ಪ್ರಯತ್ನ ಪಡದಿರುವುದನ್ನು ಗುರುತಿಸಬಹುದಾಗಿದೆ. ಈಗಾಗಲೇ ದೇಶದಲ್ಲಿ 1992–93ರಲ್ಲಿ ಜಾರಿಗೆ ಬಂದಿರುವ ಗ್ರಾಮೀಣ/ನಗರ ಸ್ಥಳೀಯ ಸರಕಾರಗಳಲ್ಲಿ ಶೇ.50%ರಷ್ಟು ಮಹಿಳಾ ಮೀಸಲಾತಿ

ಕುರಿತಂತೆ ದೊರೆಯುವ ದಾಖಲಾತಿಯನ್ನು ಆಧರಿಸಿ ಮತ್ತು ವಿವಿಧ ಪಕ್ಷಗಳು ಗ್ರಾಮೀಣ/ನಗರ ಸ್ಥಳೀಯ ಸರಕಾರಗಳು ಮಹಿಳೆಯರಿಗೆ ನೀಡಿರುವ ಸ್ಥಾನಮಾನ, ಪಕ್ಷದ ಜವಬ್ದಾರಿ ಮಹಿಗೆ ನೀಡಿರುವ ರಾಜಕೀಯ ಧೋರಣ ಶಕ್ತಿ ಹಾಗೂ ರಾಜಕೀಯ ಸಾಮಾಜೀಕರಣ ಹೀಗೆ ಮುಂತಾದ ಸಂಗತಿಗಳ ಕುರಿತಂತೆ ರಾಯಚೂರು ಜಿಲ್ಲೆಯಲ್ಲಿನ ಗ್ರಾಮೀಣ/ನಗರ/ಸ್ಥಳೀಯ ಸರಕಾರದಲ್ಲಿ ರಾಜಕೀಯ ಪಕ್ಷಗಳ ಮೂಲಕ ಪ್ರತಿನಿಧೀಕರಣಗೊಂಡ ಮಹಿಳೆಯರನ್ನು ಅನುಲಕ್ಷಿಸಿದರೆ 'ರಾಜಕೀಯದಲ್ಲಿ ಮಹಿಳಾ ಸಹಭಾಗಿತ್ವ ಹಾಗೂ ರಾಜಕೀಯ ಸಾಮಾಜೀಕರಣದ ಅಂಶಗಳು ಕಂಡು ಬರುತ್ತದೆ. ಇದಕ್ಕಾಗಿ ಮೊದಲಿಗೆ ಈ ಕೆಳಗಿನ ಕೋಷ್ಠಕದಲ್ಲಿ ರಾಯಚೂರು ಜಿಲ್ಲೆಯಲ್ಲಿನ ಗ್ರಾಮೀಣ/ನಗರ ಪಟ್ಟಣ ಸ್ಥಳೀಯ ಸರಕಾರಗಳಲ್ಲಿ ಒಟ್ಟು ಮಹಿಳೆಯರನ್ನು ಇಲ್ಲಿ ಸಂಗ್ರಹಿಸಲಾಗಿದೆ.

**ಕೊಷ್ಟಕ–2 ರಾಯಚೂರು ಜಿಲ್ಲೆಯಲ್ಲಿನ ಲೋಕ ಸಭೆ, ವಿಧಾನ ಸಭೆ, ವಿಧಾನ ಪರಿಷತ್ ಹಾಗೂ ವಿವಿಧ ಸ್ಥಳೀಯ ಸರಕಾರಗಳಲ್ಲಿ ಮಹಿಳಾ ಮತ್ತು ಪುರುಷರ ಪ್ರತಿನಿಧೀಕರಣದ ವಿವರ**

| ಕ್ರ. ಸಂ | ಜಿಲ್ಲೆ | ಎಂ.ಪಿ. | | ಎಂ.ಎಲ್.ಎ | | ವಿಧಾನ ಪರಿಷತ್ | ಜಿಲ್ಲಾ ಪಂಚಾಯತ್ | | |
|---|---|---|---|---|---|---|---|---|---|
| | | ಹೆ | ಗಂ | ಹೆ | ಗಂ | | ಒಟ್ಟು | ಹೆ | ಗಂ |
| 1 | ರಾಯಚೂರು. | – | 1 | – | 1 | 3 | 8 | 11 | 11 |
| 2 | ಸಿಂಧನೂರು | – | – | _ | 1 | – | 7 | – | – |
| 3 | ಲಿಂಗಸೂಗುರು | – | – | | 1 | – | 7 | – | – |
| 4 | ಮಾನ್ವಿ | – | – | – | 1 | – | 4 | – | – |
| 5 | ದೇವದುರ್ಗಾ | – | – | – | 1 | – | 7 | – | – |
| 6 | ಮುದುಗಲ್ | – | – | – | – | – | – | – | – |
| 7 | ಮಸ್ಕಿ | – | – | – | 1 | – | 5 | – | – |
| 8 | ಸಿರಿವಾರ | – | – | – | – | – | 4 | – | – |
| 9 | ಕವಿತಾಳ | – | – | – | – | – | – | – | – |
| 10 | ತುರುವಿಹಾಳ | – | – | – | – | – | – | – | – |
| 11 | ಜಾಲಹಳ್ಳಿ | – | – | – | – | – | – | – | – |
| 12 | ಬಳಗನೂರು | – | – | – | – | – | – | – | – |
| 13 | ಹಟ್ಟಿ | – | – | – | – | – | – | – | – |
| | **ಒಟ್ಟು** | | **1** | | **6** | **3** | **42** | | |

**ಕೊಷ್ಟಕ–2 (a) ರಾಯಚೂರು ಜಿಲ್ಲೆಯಲ್ಲಿನ ತಾಲೂಕು ಪಂಚಾಯತ್, ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯತ್ ಹಾಗೂ ವಿವಿಧ ಸ್ಥಳೀಯ ಸರಕಾರಗಳಲ್ಲಿ ಮಹಿಳಾ ಮತ್ತು ಪುರುಷರ ಪ್ರತಿನಿಧೀಕರಣದ ವಿವರ**

| ಕ್ರ. ಸಂ. | ಜಿಲ್ಲೆ | ತಾಲೂಕು ಪಂಚಾಯತ್ | | ನಗರ ಸಭೆ | | ಪುರಸಭೆ | | ಪಟ್ಟಣ ಪಂಚಾಯತ್ | |
|---|---|---|---|---|---|---|---|---|---|
| | | ಹೆ | ಗಂ | ಹೆ | ಗಂ | ಹೆ | ಗಂ | ಹೆ | ಗಂ |
| 1 | ರಾಯಚೂರು. | 11 | 11 | 18 | 17 | – | – | – | – |
| 2 | ಸಿಂಧನೂರು | 10 | 10 | 15 | 16 | – | – | – | – |
| 3 | ಲಿಂಗಸೂಗುರು | 9 | 9 | – | – | 6 | 5 | – | – |
| 4 | ಮಾನ್ವಿ | 6 | 5 | – | – | 1 | 2 | – | – |
| 5 | ದೇವದುರ್ಗಾ | 10 | 9 | – | – | 1 | 2 | – | – |
| 6 | ಮುದುಗಲ್ | – | – | – | – | 2 | 3 | – | – |
| 7 | ಮಸ್ಕಿ | 7 | 6 | – | – | 1 | 2 | – | – |
| 8 | ಸಿರಿವಾರ | 5 | 4 | – | – | – | – | 8 | 7 |
| 9 | ಕವಿತಾಳ | – | – | – | – | – | – | 7 | 9 |
| 10 | ತುರುವಿಹಾಳ | – | – | – | – | – | – | 6 | 6 |
| 11 | ಜಾಲಹಳ್ಳಿ | – | – | – | – | – | – | 6 | 6 |
| 12 | ಬಳಗನೂರು | – | – | – | – | – | – | 6 | 6 |
| 13 | ಹಟ್ಟಿ | – | – | – | – | – | – | 6 | 6 |
| | **ಒಟ್ಟು** | **58** | **54** | **33** | **33** | **51** | **54** | **39** | **40** |

ಈ ಮೇಲಿನ ಕೋಷ್ಟಕದಲ್ಲಿ ದೊರೆಯುವ ಮಾಹಿತಿಯನ್ನು ಆಧಾರಿಸಿ ಹಾಗೂ ರಾಯಚೂರು ಜಿಲ್ಲೆಯಲ್ಲಿ ರಾಜಕೀಯ ಸಹಭಾಗಿತ್ವಕ್ಕೆ ಇರುವ ಕ್ಷೇತ್ರಗಳನ್ನು ಅನುಲಕ್ಷಿಸಿದರೆ, ರಾಯಚೂರು ಜಿಲ್ಲೆಯಲ್ಲಿ ಒಟ್ಟು ಎರಡು ಲೋಕಸಭೆ ಕ್ಷೇತ್ರ (ರಾಯಚೂರು ಜಿಲ್ಲೆ ಸಿಂಧನೂರು ತಾಲೂಕು) ಒಟ್ಟು 7 ವಿಧಾನ ಸಭೆ

ಕ್ಷೇತ್ರ, ಒಟ್ಟು 3 ವಿಧಾನ ಪರಿಷತ್ ಕ್ಷೇತ್ರ ಒಟ್ಟು 42 ಜಿಲ್ಲಾ ಪಂಚಾಯತ್ ಕ್ಷೇತ್ರ, ಒಟ್ಟು 112 ತಾಲೂಕು ಪಂಚಾಯತ ಕ್ಷೇತ್ರ, ಒಟ್ಟು 66 ನಗರ ಸಭೆ ಕ್ಷೇತ್ರ, ಒಟ್ಟು 105 ಪುರಸಭೆ ಕ್ಷೇತ್ರ, ಒಟ್ಟು 80 ಪಟ್ಟಣ ಪಂಚಾಯತ ಕ್ಷೇತ್ರ ಇವೆ.

ಈ ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲಿ ದೇಶ/ರಾಜ್ಯ ನೊಂದಾಯಿತ ರಾಷ್ಟ್ರೀಯ ಪಕ್ಷಗಳು ಹಾಗೂ ಸ್ಥಳೀಯ ಪಕ್ಷಗಳು ಸ್ಪರ್ಧಿಸುತ್ತಿವೆ. ಇದಲ್ಲದೆ 1992–1993 ಸಂವಿಧಾನದ 73 ಮತ್ತು 74ನೇ ತಿದ್ದುಪಡಿ ಪಂಚಾಯತ್ ರಾಜ್ ಕಾಯ್ದಿಯೆ ಪ್ರಕಾರ ಮಹಿಳೆಯರು ಗ್ರಾಮೀಣ ಮತ್ತು ಸ್ಥಳೀಯ ಸರಕಾರಗಳಲ್ಲಿ ಸಮಾನವಾಗಿ ಭಾಗವಹಿಸಿಲಿಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದರನ್ವಯ ಗ್ರಾಮೀಣ ಸ್ಥಳೀಯ ಸರಕಾರಗಳಾದ, ಜಿಲ್ಲಾ ಪಂಚಾಯತ್‌ನಲ್ಲಿ ಒಟ್ಟು 22 ಜನ ಮಹಿಳಾ ಸದಸ್ಯರು. ತಾಲೂಕು ಪಂಚಾಯತನಲ್ಲಿ ಒಟ್ಟು 58 ಜನ ಮಹಿಳಾ ಸದಸ್ಯರು. ಪಟ್ಟಣ ಪಂಚಾಯತ್‌ನ ಒಟ್ಟು 39 ಜನ ಮಹಿಳಾ ಸದಸ್ಯರು. ಇದಲ್ಲದೇ ನಗರದ ಸ್ಥಳೀಯ ಸರಕಾರಗಳಾದ ನಗರ ಸಭೆಗೆ ರಾಯಚೂರು ಜಿಲ್ಲೆಯಲ್ಲಿ ಒಟ್ಟು 33 ಜನ ಮಹಿಳಾ ಸದಸ್ಯರು, ಪುರುಸಭೆಗೆ ರಾಯಚೂರು ಜಿಲ್ಲೆಯಲ್ಲಿ ಒಟ್ಟು 51 ಜನ ಮಹಿಳಾ ಸದಸ್ಯರು ಸಂವಿಧಾನದ ಮೀಸಲಾತಿ ಭಾಗವಾಗಿ ಪ್ರತಿನಿಧೀಕರಣ ಹೊಂದಿರುವುದು ಕಂಡುಬರುತ್ತದೆ.

ಈ ಮೇಲಿನ ಎಲ್ಲಾ ಸಂಸ್ಥೆಗಳಲ್ಲಿನ ಚುನಾಯಿತ ಮಹಿಳಾ ಸದಸ್ಯರು ರಾಜಕೀಯ ಸಹಭಾಗಿತ್ವ ಹಾಗೂ ರಾಜಕೀಯ ಸಮಾಜೀಕರಣದ ಕುರಿತಂತೆ ಅವಲೋಕಿಸುತ್ತಾ ಹೋದರೆ ಅನೇಕ ತರಹದಲ್ಲಿ ರಾಜಕೀಯ ಸಹಭಾಗಿತ್ವದ ಸ್ವರೂಪ ಕಂಡು ಬರುತ್ತದೆ. ಯಾಕೆಂದರೆ ಮಹಿಳೆಯರಿಗೆ ಕುಟುಂಬ, ಶಿಕ್ಷಣ, ಧರ್ಮ, ಸಮಾಜ ನೆರೆಹೊರೆ ಮಾಧ್ಯಮ ಹೀಗೆ ಸಾಮಾಜೀಕರಣದ ನಿಯೋಗಗಳು ಮಹಿಳೆಗೆ ಸಾಮಾಜೀಕರಣ ರೂಪಿಸುವಲ್ಲಿ ಭಿನ್ನತೆಗಳು ಕಂಡು ಬರುತ್ತದೆ. ಹಿನ್ನೆಲೆಯಿಂದ ಗಮನಿಸಿದಾಗ ರಾಜಕೀಯದಲ್ಲಿ ಮಹಿಳಾ ಸಹಭಾಗಿತ್ವದಲ್ಲಿ ಭಿನ್ನತೆ ಕಂಡು ಬರುತ್ತದೆ.

ರಾಜಕೀಯದಲ್ಲಿ ಮಹಿಳಾ ಸಹಭಾಗಿತ್ವ ಉತ್ತಮ ಗೊಳ್ಳಬೇಕಾದರೆ ನಿರ್ಣಯ ಪ್ರಕ್ರೀಯೆ ಬಹಳ ಮಹತ್ವವಾದದ್ದು. ಈ ನಿರ್ಣಯ ಪ್ರಕ್ರೀಯೆ, ವ್ಯಕ್ತಿಯಿಂದ ವ್ಯಕ್ತಿಗೆ ಬಿನ್ನತೆಯು ಕಂಡು ಬರುತ್ತದೆ. ಹೀಗಾಗಿ ಈ ನಿರ್ಣಯವನ್ನು ಪ್ರಭಾವಿಸುವ ಈ ಸಾಮಾಜೀಕರಣದ ನಿಯೋಗಗಳು ಪುರುಷ ಪ್ರಧಾನವಾದ ರಾಜಕೀಯದಲ್ಲಿ ಪುರಷ ಪರವಾದ ಚಿಂತನೆ ನಿರ್ಣಯಗಳನ್ನು ಸಾಮಾಜೀಕರಣಕ್ಕೆ ಒಳಗಾಗಿಸಿ, ಅವಳ ರಾಜಕೀಯ, ಸಾಮಾಜಿಕ ಶೈಕ್ಷಣಿಕ ಹಂತದ ಕ್ಷೇತ್ರದಲ್ಲಿ ಮಹಿಳೆಗೆ ನಿರ್ಣಯ ಪ್ರಕ್ರೀಯೆ ಸ್ವತಂತ್ರ್ಯವಾಗಿ ಲಭಿಸದಂತೆ ರೂಪಿಸಿರುವುದು ಕಂಡುಬರುತ್ತಿದೆ.

ರಾಜಕೀಯದಲ್ಲಿ ಮಹಿಳಾ ಸಹಭಾಗಿತ್ವ ಮಾನಸಿಕವಾಗಿ ನೊಡಿದರೆ, ಪುರಷರ ಪರ ಸಹಭಾಗಿತ್ವವೇ ಕಂಡುಬರುತ್ತದೆ. ಹೆಸರಿಗೆ ಮತ್ತು ದೈಹಿಕ ಮಾತ್ರ ಮಹಿಳೆ ಕಾಣಿಸಿಕೊಳ್ಳುತ್ತಾ ಇದ್ದಾಳೆ. ಇದಕ್ಕೆ ಮುಂದುವರೆದು 1994ರಿಂದಿಚೇಗೆ ರಾಯಚೂರು ಜಿಲ್ಲೆಯಲ್ಲಿನ ಲೋಕಸಭೆ, ವಿಧಾನ ಸಭೆ, ವಿಧಾನ ಪರಿಷತ್ತು ಆಯ್ಕೆಗೊಂಡ ಮಹಿಳೆಯರು ಕಂಡು ಬರುವುದಿಲ್ಲ. ಇದು ಮುಂದುವರೆದು ಜಿಲ್ಲೆಯಲ್ಲಿ ಒಟ್ಟು 2 ಲೋಕಸಭೆ ಕ್ಷೇತ್ರಗಳಿವೆ. ಒಟ್ಟು 7 ವಿಧಾನಸಭೆ ಕ್ಷೇತ್ರಗಳಿವೆ. ಒಟ್ಟು 3 ವಿಧಾನ ಪರಿಷತ್ ಗೆ ಸ್ಪರ್ಧಿಸಲ್ಲಿಕ್ಕೆ ಕ್ಷೇತ್ರಗಳಿವೆ. ಇಷ್ಟು ಇದ್ದರು 1957 ರಿಂದ 2018ರ ವರೆಗೆ ಸುಮಾರು 14 ವಿಧಾನ ಸಭೆಯ ಎಲೆಕ್ಷನ್‌ಗಳು ಬಂದು ಹೋದರು ರಾಯಚೂರು ಜಿಲ್ಲೆಯಲ್ಲಿ ಕೇವಲ ಮೂರು ಮಹಿಳೆಯರು ಮಾತ್ರ ವಿಧಾನಸಭೆಗೆ

ಆಯ್ಕೆಗೊಂಡು ಹೋಗಿರುವುದು ಕಂಡುಬರುತ್ತದೆ. ಉಳಿದಂತೆ 14 ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಗೆದ್ದ ಸ್ಪರ್ಧಿಗೆ ಕಡಿಮೆ ಅಂತರದಲ್ಲಿ ಸೋತ ಯಾವ ಒಟ್ಟು ಮಹಿಳಾ ಅಭ್ಯರ್ಥಿಗಳು ಕಂಡು ಬರುವುದಿಲ್ಲ. ಇಲ್ಲಿ ದೊರೆಯುವ ಅಂಕಿಅಂಶಗಳೆ ರಾಯಚೂರು ಜಿಲ್ಲೆಯಲ್ಲಿ ರಾಜಕೀಯದಲ್ಲಿ ಮಹಿಳಾ ಸಹಭಾಗಿತ್ವಕ್ಕೆ ಸಂಬಂಧಿಸಿದಂತೆ ಸ್ವರೂಪವನ್ನು ತಿಳಿಸುತ್ತದೆ. ಲೋಕಸಭೆ, ವಿಧಾನ ಪರಿಷತ್ತು, ಮಹಿಳಾ ಅಭ್ಯರ್ಥಿಗಳ ಗೆದ್ದ ಉದಾಹರಣೆಗಳು ದೊರೆಯುವುದಿಲ್ಲ ಅಂದರೆ ರಾಯಚೂರು ಜಿಲ್ಲೆಯಲ್ಲಿ ರಾಜಕೀಯದಲ್ಲಿ ಮಹಿಳಾ ಸಹಭಾಗಿತ್ವ ಕ್ರೀಯಾಶೀಲ ಮಟ್ಟದಲ್ಲಿ ಇಲ್ಲದೆ ಇರುವುದು ಕಂಡುಬರುತ್ತದೆ.

**ಉಪಸಂಹಾರ**

ಒಟ್ಟಾರೆಯಾಗಿದ ರಾಜಕೀಯದಲ್ಲಿ ಮಹಿಳಾ ಸಹಭಾಗಿತ್ವಕ್ಕೆ ಹಾಗೂ ರಾಜಕೀಯ ಸಾಮಾಜೀಕರಣಕ್ಕೆ ಬಹುಮುಖ್ಯವಾಗಿ ಬೇಕಾಗಿರುವ ಸಂಗತಿಗಳೆಂದರೇ, ಸ್ವಾತಂತ್ರ್ಯ ಆರ್ಥಿಕ ಸ್ವಾವಲಂಬನೆ ಮತ್ತು ಲಿಂಗ ಸಮಾನವಾದ ಧೋರಣೆಯ ಸಮಾಜ. ಈ ವ್ಯವಸ್ಥೆಯಲ್ಲಿ ಇವುಗಳು ತನ್ನಿಂದ ತಾನೇ ಸುಲುಭವಾಗಿ ಸಿಗುವಂಥವಲ್ಲ ರಾಜಕೀಯದಲ್ಲಿ ಮಹಿಳಾ ಕ್ರೀಯಾಶೀಲ ಸಹಭಾಗಿತ್ವಕ್ಕೆ ತೊಡಕು ಉಂಟುಮಾಡುವ ಸಂಗತಿಗಳಲ್ಲಿ ಬಹುಮುಖ್ಯವಾಗಿ ಕುಟುಂಬ, ಪುರುಷಾಧಿಕಾರ, ಚುನಾವಣಾ ಪ್ರಕ್ರೀಯೆ ಮಹಿಳೆಗೆ ಇರುವ ಅನಕ್ಷರತೆ, ಆರ್ಥಿಕ ಸಂಗತಿಗಳು ಸಮೂಹ ಮಾಧ್ಯಮಗಳು, ಜಾತಿವರ್ಗ, ಅಧಿಕಾರಶಾಹಿ ನೆಲೆ, ಪುರುಷ ಪ್ರಧಾನತೆ,

ಹೀಗೆ ಹಲವು ಆಯಾಮಗಳಲ್ಲಿ ರಾಜಕೀಯದಲ್ಲಿ ಮಹಿಳಾ ಸಹಭಾಗಿತ್ವಕ್ಕೆ ಹಾಗೂ ರಾಜಕೀಯ ಸಾಮಾಜೀಕರಣಕ್ಕೆ ಅಡ್ಡಿಯುಂಟುಮಾಡುವ ಸಂಗತಿಗಳನ್ನು ಅರಿಯಬೇಕಾಗಿದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯನ್ನು ಗಂಡಿನ ಅವಶ್ಯಕತೆಗೆ ತಕ್ಕಂತೆ ರೂಪಿಸಲಾಗಿದೆ. ಹೀಗಾಗಿ ಮಹಿಳೆಗೆ ಸಾರ್ವತ್ರಿಕ ಬದುಕು ಸಾಗಿಸುವುದು ಕಷ್ಟವಾಗಿದೆ. ಆದರೂ ಇಂದು ಬದಲಾದ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭದಲ್ಲಿ ಮಹಿಳೆ ಹಲವು ರೀತಿಯ ಅವಕಾಶ ಸವಲತ್ತುಗಳನ್ನು ಸಂವಿಧಾನಾತ್ಮಕವಾಗಿ ನೀಡಿರುವುದು ಕಂಡು ಬರುತ್ತದೆ. ಈ ಸಂವಿಧಾನಾತ್ಮಕ ಅವಕಾಶಗಳನ್ನು ಬಳಸಿಕೊಳ್ಳುವ ರಾಜಕೀಯ ಧಾರಣಾ ಸಾಮರ್ಥ್ಯ ಹೊಂದಬೇಕಾಗಿರುವುದು ಅಷ್ಟೇ ಮುಖ್ಯವಾದುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಅನುಪಮ ಎಚ್.ಎಸ್. (2012). ಮಹಿಳೆಯ ದಲಿತತ್ವ ಮತ್ತು ರಾಜಕೀಯ ಪ್ರಜ್ಞೆ, ಲಡಾಯಿ ಪ್ರಕಾಶನ, ಗದಗ.
- ಆಚಾರ್ ವನಮಾಲಾ. (1968). ಸ್ತ್ರೀ ಮತ್ತು ಶಿಕ್ಷಣ. ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ.
- ಇಂದಿರಾ ಆರ್. (1995). ಸ್ತ್ರೀವಾದಿ ದಿಕ್ಸೂಚಿ. ಸಮತಾ ಅಧ್ಯಯನಕೇಂದ್ರ, ಮೈಸೂರು.
- ಕರ್ನಾಟಕ ರಾಜ್ಯ ಪತ್ರ ಅಧಿಸೂಚನೆ, ದಿನಾಂಕ, 24.03.2021 ವಿಶೇಷ ರಾಜ್ಯ ಪತ್ರಕೆ. ಬೆಂಗಳೂರು.
- ಮೀನಾಕ್ಷಿ. (2010). ನಿರ್ಣಯ ಪ್ರಕ್ರಿಯೆಯಲ್ಲಿ ಚುನಾಯಿತ ಮಹಿಳೆಯರ ಪಾತ್ರ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

- ರಾಜ್ಯ ಚುನಾವನಾ ಆಯೋಗ ಕರ್ನಾಟಕ, ವೆಬ್ ಸೈಟ್ ನಿಂದ ಪಡೆದ ಮಾಹಿತಿ.
- Ssatyabrata chakrabarth (Ed.). (2005). Political Sociology. TRINITY Press, Bangalore.
- ಶರ್ಮ. ಎ.ಆರ್. (2013). ರಾಜಕೀಯ ಮತ್ತು ಸಮಾಜ. ನಾಗಾರ್ಜುನ ಎಂಟರ್ ಪ್ರೈಸಸ್. ದಾವಣಗೆರೆ.
- ವಿಠಲರಾವ್ ಗಾಯಕ್ವಾಡ್. (ಅನು.) ಆಶ್ವಿನಿ ಧೋಂಗಡೆ. (ಮೂ.). (2005). ಸ್ತ್ರೀವಾದಿ ವಿಮರ್ಶೆ ಸ್ವರೂಪ ಮತ್ತು ಪರಿಕಲ್ಪನೆಗಳು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.